**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-6 /PW-5**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಾಜು |
| ತಂದೆ ಹೆಸರು | ಃ | ಮುತ್ತಪ್ಪ |
| ವಯಸ್ಸು | ಃ | 25 |
| ಉದ್ಯೋಗ | ಃ | ಕರೆಂಟ್ ಕೆಲಸ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 27-08-2024**

ಚಾಸಾ-1 ಗೊತ್ತು. ಚಾಸಾ-4 ನನ್ನ ತಾಯಿ, ಚಾಸಾ-5 ನನ್ನ ತಮ್ಮ, ಚಾಸಾ-7 ನನ್ನ ಅಕ್ಕ. ಆರೋಪಿತರು ಗೊತ್ತು. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಯಾವುದೇ ಜಗಳವನ್ನು ನೋಡಿಲ್ಲ, ಬಿಡಿಸಿಲ್ಲ.

(**ಈ ಹಂತದಲ್ಲಿ ಮಾನ್ಯ** ಹಿರಿಯ **ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 21.03.2021 ರಂದು ಮಧ್ಯಾಹ್ನ 12 ಗಂಟೆಗೆ ನಾನು ಚಾಸಾ-1, 7 ಮನೆಯಲ್ಲಿ ಇದ್ದಾಗ ಆರೋಪಿತರು ಅಲ್ಲಿಗೆ ಬಂದು ಮನೆಯ ಪಕ್ಕದ ಜಾಗೆಯ ವಿಷಯವಾಗಿ ಚಾಸಾ-1 ರವರ ಜೊತೆ ಜಗಳ ತೆಗೆದು 1 ನೇ ಆರೋಪಿ ಚಾಸಾ-1 ರವರ ತಲೆಗೆ ಕಟ್ಟಿಗೆಯಿಂದ ಹೊಡೆದು ಭಾರಿ ಒಳಪೆಟ್ಟು ಮಾಡಿದನು ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದು ತಡೆದು ನಿಲ್ಲಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿ ಕೈಗಳಿಂದ ಬೆನ್ನಿಗೆ ಹೊಡೆದು ಒಳಪೆಟ್ಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಗಳಿಂದ ಚಾಸಾ-1 ರವರ ಕಪಾಳಕ್ಕೆ ಹೊಡೆದುತ್ತಾನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಸೇರಿ ಚಾಸಾ-1 ರವರಿಗೆ ಇನ್ನೊಮ್ಮೆ ಸಿಕ್ಕರೇ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ, ಜಗಳವನ್ನು ನಾನು ಚಾಸಾ-1, 5 ಮತ್ತು 7 ರವರು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ

ನಿರಾಕರಿಸಿದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಎಲ್ಲ ಗೊತ್ತಿದ್ದರು ಜಗಳವನ್ನು ನಾನು ಪ್ರತ್ಯಕ್ಷವಾಗಿ ನೋಡಿ ಬಿಡಿಸಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-5 /PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರವಿ |
| ತಂದೆ ಹೆಸರು | ಃ | ಹನುಮಯ್ಯ |
| ವಯಸ್ಸು | ಃ | 23 |
| ಉದ್ಯೋಗ | ಃ | ಚಾಲಕ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಭಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 27-08-2024**

ಚಾಸಾ-1 ನನ್ನ ಮಾವ, ಚಾಸಾ-4 ನನ್ನ ತಾಯಿ, ಚಾಸಾ-6 ನನ್ನ ಅಣ್ಣ, ಚಾಸಾ-7 ನನ್ನ ಅಕ್ಕ. ಆರೋಪಿತರು ಗೊತ್ತು. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಯಾವುದೇ ಜಗಳವನ್ನು ನೋಡಿಲ್ಲ, ಬಿಡಿಸಿಲ್ಲ.

(**ಈ ಹಂತದಲ್ಲಿ ಮಾನ್ಯ** ಹಿರಿಯ **ಎಪಿಪಿ ಅವರು ಸಾಕ್ಷಿಯನ್ನುಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 21.03.2021 ರಂದು ಮಧ್ಯಾಹ್ನ 12 ಗಂಟೆಗೆ ನಾನು ಚಾಸಾ-1, 7 ಮನೆಯಲ್ಲಿ ಇದ್ದಾಗ ಆರೋಪಿತರು ಅಲ್ಲಿಗೆ ಬಂದು ಮನೆಯ ಪಕ್ಕದ ಜಾಗೆಯ ವಿಷಯವಾಗಿ ಚಾಸಾ-1 ರವರ ಜೊತೆ ಜಗಳ ತೆಗೆದು 1 ನೇ ಆರೋಪಿ ಚಾಸಾ-1 ರವರ ತಲೆಗೆ ಕಟ್ಟಿಗೆಯಿಂದ ಹೊಡೆದು ಭಾರಿ ಒಳಪೆಟ್ಟು ಮಾಡಿದನು ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದು ತಡೆದು ನಿಲ್ಲಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿ ಕೈಗಳಿಂದ ಬೆನ್ನಿಗೆ ಹೊಡೆದು ಒಳಪೆಟ್ಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಗಳಿಂದ ಚಾಸಾ-1 ರವರ ಕಪಾಳಕ್ಕೆ ಹೊಡೆದುತ್ತಾನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಸೇರಿ ಚಾಸಾ-1 ರವರಿಗೆ ಇನ್ನೊಮ್ಮೆ ಸಿಕ್ಕರೇ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ, ಜಗಳವನ್ನು ನಾನು ಚಾಸಾ-1, 6 ಮತ್ತು 7 ರವರು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ

ನಿರಾಕರಿಸಿದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಎಲ್ಲ ಗೊತ್ತಿದ್ದರು ಜಗಳವನ್ನು ನಾನು ಪ್ರತ್ಯಕ್ಷವಾಗಿ ನೋಡಿ ಬಿಡಿಸಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-2 /PW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮೆಹಮೂದ್ |
| ತಂದೆ ಹೆಸರು | ಃ | ನದೀಮ್ ಸಾಬ |
| ವಯಸ್ಸು | ಃ | 63 |
| ಉದ್ಯೋಗ | ಃ | ಚಾಲಕ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 27-08-2024**

ಚಾಸಾ-3 ಗೋತ್ತು. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದು ಗುನ್ನೆ ಸ್ಥಳ ಪಂಚನಾಮೆ ಆಗಿರುತ್ತದೆ. ಅದನ್ನು ನಿಪಿ-4 ಎಂದು ಸಂಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸುಮಾರು 1-2 ವರ್ಷಗಳ ಹಿಂದೆ ಪೋಲಿಸರು ಆರೋಪಿತರ ಮನೆ ಮುಂದೆ ಗುನ್ನೆ ಸ್ದಳ ಪಂಚನಾಮೆಯನ್ನು ನಮ್ಮ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯಲಿಲ ಬರೆದ ಸಂಗತಿಗಳು ಗೊತ್ತಿಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ನಂತರ ಪೋಲಿಸರು 2 ಭಾವಚಿತ್ರಗಳನ್ನು ತೆಗೆದಿರುತ್ತಾರೆ . ಅವುಗಳನ್ನು ಈಗಾಗಲೇ ನಿಪಿ -2 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ನಿಪಿ-4 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಪೋಲೀಸರು ನನಗೆ ಅದನ್ನು ಓದಿ ಹೇಳಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮುಮಾಗಳನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

(**ಈ ಹಂತದಲ್ಲಿ ಮಾನ್ಯ** ಹಿರಿಯ **ಎಪಿಪಿ ಅವರು ಸಾಕ್ಷಿಯನ್ನುಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನುಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 25.03.2021 ರಂದು ಸಂಜೆ 04.30 ರಿಂದ 05.30 ಗಂಟೆ ವರೆಗೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಚಾಸಾ-4 ರವರು ಸ್ದಳ ತೋರಿಸಿದ ಮೇರೆಗೆ ಗುನ್ನೆ ಸ್ದಳ ಪಂಚನಾಮೆಯನ್ನು ಮಾಡಿ ಸ್ಥಳದಿಂದ ಒಂದು ತಿ ಫೀಟ್ ಉದ್ದದ ಚೌಕಕಾರದ ಕಟ್ಟಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಮತ್ತು ಅ ಸಮಯದಲ್ಲಿ 2 ಭಾವಚಿತ್ರ ತೆಗೆದಿರುತ್ತಾರೆ ಎಂದರೆ

ಸರಿಯಲ್ಲ. ನನಗೆ ಎಲ್ಲ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಃ ಇರುವುದಿಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**